## ಕರ್ನಾಟಕ ವಿಧಾನಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಕೆ.ಎಸ್. ನವೀನ್, ಇವರು ನಿಯಮ-330ರಡಿ ರಾಜ್ಯಾದ್ಯಂತ ಹಾವಿನ ಕಡಿತದಿಂದ ಮೃತರಾಗಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಿದ್ದು ತುಂಬಾ ಗಂಭೀರವಾದ ವಿಷಯವಾಗಿದೆ. ಈ ಹಾವಿನ ಕಡಿತದಿಂದ ಬಾಧೆಗೊಳಗಾಗುತ್ತಿರುವವರಲ್ಲಿ ಮಕ್ಕಳು, ಮಹಿಳೆಯರು ಮತ್ತು ವೃದ್ಧರ ಸಂಖ್ಯೆ ಹೆಚ್ಚಿದೆ. ಅಲ್ಲದೆ ಸರಕಾರವು ರೈತರ ಪಂಪ್ ಸೆಟ್ಗೆ ರಾತ್ರಿ ಸಮಯದಲ್ಲಿ ವಿದ್ಯುತ್ ನೀಡುತ್ತಿರುವುದರಿಂದ ಆ ಸಮಯದಲ್ಲಿ ಹೊಲ ಗದ್ದೆಗಳಿಗೆ ಹೋಗುವ ರೈತರೂ ಹಾವಿನ ಕಡಿತಕ್ಕೆ ಒಳಗಾಗುತ್ತಿದ್ದಾರೆ. ಹಾವಿನ ವಿಷದ ಔಷಧಿಯು ಸರ್ಕಾರದ ಶುಶ್ರೂಷಾಲಯಗಳಲ್ಲಿ ಲಭ್ಯವಿರುವುದಿಲ್ಲ. ಪ್ರತಿಯೊಂದು ಹಾವಿನ ವಿಷಕ್ಕೂ ಅದರದ್ದೇ ಆದಂತಹ ಔಷಧದ ಅಗತ್ಯ ಇದೆ. ಒಂದೇ ಔಷಧವನ್ನು ಎಲ್ಲಾ ರೀತಿಯ ಹಾವಿನ ಕಡಿತಕ್ಕೆ ನೀಡಲು ಸಾಧ್ಯವಿಲ್ಲ ಎಂಬ ವಿಷಯಗಳ ಬಗ್ಗೆ:-**

**ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

*****

ರಾಜ್ಯಾದಾದ್ಯಂತ ಹಾವು ಕಡಿತದಿಂದ ಮೃತರಾಗುತ್ತಿರುವ ಸಂಖ್ಯೆಯ ವರದಿಯು ಏರಿಕೆಯಾಗಿರುತ್ತದೆ. ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣ ಕಾರ್ಯಕ್ರಮವು 2022 ರ ಅಂತ್ಯದಿಂದ ಮಾತ್ರವೇ ಪ್ರಾರಂಭವಾಗಿದ್ದು, ದೇಶದಲ್ಲೇ ಪ್ರಪ್ರಥಮ ಬಾರಿಗೆ ರಾಜ್ಯ ಸರ್ಕಾರವು ಅಧಿಸೂಚನೆ ಸಂಖ್ಯೆ: ಆಕುಕ 56-ಸಿಜಿಎಂ 2024, ದಿನಾಂಕ 12.12.2024ರಂತೆ ಎಲ್ಲಾ ಹಾವು ಕಡಿತ ಪ್ರಕರಣಗಳು ಹಾಗೂ ಮರಣಗಳನ್ನು ಘೋಷಿತ ಖಾಯಿಲೆ ಎಂದು ಘೋಷಣೆ ಮಾಡಿದೆ. ಇದರಂತೆ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ಒಳಗೊಂಡಂತೆ ಎಲ್ಲಾ ಆಸ್ಪತ್ರೆಗಳು ಎಲ್ಲಾ ಹಾವು ಕಡಿತ ಪ್ರಕರಣಗಳು ಹಾಗೂ ಮರಣಗಳನ್ನು ಕೇಂದ್ರ ಸರ್ಕಾರದ Integrated Health Information Platform (IHIP) ನಲ್ಲಿ ವರದಿ ಮಾಡುವುದು ಕಡ್ಡಾಯವಾಗಿರುತ್ತದೆ. ಕಾರ್ಯಕ್ರಮದ ಅನುಷ್ಠಾನದಿಂದ ಇಲಾಖೆಯ ಸಿಬ್ಬಂದಿಗಳಿಗೆ ಹಾಗೂ ಸಮುದಾಯದಲ್ಲಿ ಹೆಚ್ಚಿನ ಅರಿವು ಮೂಡಿಸಲಾಗಿದೆ. ಈ ಎಲ್ಲಾ ಕಾರಣಗಳಿಂದ ಹಾವು ಕಡಿತದ ಪ್ರಕರಣಗಳ ವರದಿಯಲ್ಲಿ ಏರಿಕೆ ಕಂಡಿರುತ್ತದೆ.

ಹಾವು ಕಡಿತದಿಂದ ಮಕ್ಕಳು, ಮಹಿಳೆಯರು ಮತ್ತು ವೃದ್ಧರು ಸೇರಿದಂತೆ ಎಲ್ಲಾ ವಯಸ್ಸಿನವರು ಬಾಧೆಗೊಳಗಾಗಿರುತ್ತಾರೆ. ಎರಡು (02)ವರ್ಷಗಳ ವರದಿಯ ವಿವರವನ್ನು **ಅನುಬಂಧ 2** ರಲ್ಲಿ ನೀಡಲಾಗಿದೆ.

ಹಾವು ಕಡಿತ ಮರಣ ಪ್ರಕರಣಗಳಲ್ಲಿ ಸಲ್ಲಿಸುವ Case Investigation Form ಅನ್ನು ಪರಿಶೀಲಿಸಿದಾಗ, ಕೃಷಿ ಚಟುವಟಿಕೆ ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿ ಸಂಭವಿಸಿರುವ ಮರಣಗಳ ಸಂಖ್ಯೆ ಈ ಕೆಳಕಂಡಂತೆ ನೀಡಲಾಗಿದೆ:-

| ವರ್ಷ | ಕೃಷಿ ಚಟುವಟಿಕೆಗಳಲ್ಲಿ ಸಂಭವಿಸಿದ ಮರಣಗಳ ಸಂಖ್ಯೆ | ಕೃಷಿಯೇತರ ಚಟುವಟಿಕೆಗಳಲ್ಲಿ ಸಂಭವಿಸಿದ ಮರಣಗಳ ಸಂಖ್ಯೆ | ಒಟ್ಟು ಮರಣಗಳ ಸಂಖ್ಯೆ |
|---|---|---|---|
| 2024 | 70 | 13 | 100 |
| 2025 | 127 | 27 | 154 |

2025ನೇ ಸಾಲಿನಲ್ಲಿ ಒಟ್ಟು 35 ಹಾವು ಕಡಿತದ ಮರಣ ಪ್ರಕರಣಗಳು ರಾತ್ರಿ ವೇಳೆ ಸಂಭವಿಸಿರುತ್ತವೆ.

ಹಾವು ಕಡಿತದ ಚಿಕಿತ್ಸೆಗೆ ನೀಡಲಾಗುವ Anti Snake Venom (ASV) ಹಾಗೂ ಇತರೇ ಔಷಧಿಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇರಿಸಲಾಗಿದೆ ಹಾಗೂ ಚಿಕಿತ್ಸೆ

ನೀಡಲಾಗುತ್ತಿದೆ. ಎಲ್ಲಾ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳನ್ನು ಹಾವು ಕಡಿತ ಚಿಕಿತ್ಸಾ ಕೇಂದ್ರಗಳಾಗಿ ಗುರುತಿಸಲಾಗಿದ್ದು, ಇಲ್ಲಿ ದಿನದ 24 ಗಂಟೆಯೂ ಹಾವು ಕಡಿತದ ರೋಗಿಗಳಿಗೆ ಒಳರೋಗಿಯಾಗಿ ಚಿಕಿತ್ಸೆ ನೀಡಲಾಗುತ್ತಿದೆ.

ದೇಶದಾದ್ಯಂತ ಮಾರುಕಟ್ಟೆಯಲ್ಲಿ ಲಭ್ಯವಿರುವ Poly Valent/Specific Anti Snake Venom, ಇದು ಸಾಮಾನ್ಯವಾಗಿ ಕಂಡು ಬರುವಂತಹ 4 Big species ಗಳಾದ ನಾಗರಹಾವು (Indian Cobra), ಕಟ್ಟಾವು (Common Krait), ಕೊಳಕು ಮಂಡಲದ ಹಾವು (Russell's Viper) ಹಾಗೂ ಗರಗಸ ಮಂಡಲ (Saw scaled viper) ಈ ಎಲ್ಲಾ ಪ್ರಭೇದದ ವಿಷಗಳಿಗೆ ಪರಿಣಾಮಕಾರಿಯಾಗಿರುತ್ತದೆ. ಒಂದೇ ಹಾವಿಗೆ ಪರಿಣಾಮಕಾರಿಯಾಗುವಂತಹ Mono Valent/Specific ASV ಗಳ ಬಗ್ಗೆ ಹಾಗೂ Region specific ASV ಗಳ ಬಗ್ಗೆ ಸಂಶೋಧನೆಗಳು ನಡೆಯುತ್ತಿವೆ. ಬೆಂಗಳೂರಿನ IISc ಯ Evolutionary Venomics Lab ನಲ್ಲಿ ಕೂಡ ಇದರ ಬಗ್ಗೆ ಅನೇಕ ಸಂಶೋಧನೆಗಳು ನಡೆಯುತ್ತಿವೆ. ಹೊಸ ರೀತಿಯ ಔಷಧಿಗಳು ಮಾರುಕಟ್ಟೆಯಲ್ಲಿ ಲಭ್ಯವಾದ ನಂತರ, ಔಷಧಿಯ ಅಗತ್ಯತೆಯನುಸಾರ ಸರ್ಕಾರಿ ಆಸ್ಪತ್ರೆಗಳಲ್ಲಿ ಒದಗಿಸುವ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲಾಗುವುದು.

ಮುಂದುವರೆದು ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು ಎಲ್ಲಾ ಹಾವು ಕಡಿತ ಅಥವಾ ನಾಯಿ/ಪ್ರಾಣಿಗಳ ಕಡಿತದ ಎಲ್ಲಾ ತುರ್ತು ಪ್ರಕರಣಗಳಲ್ಲಿ ಮುಂಗಡ ಪಾವತಿಗೆ ಒತ್ತಾಯಿಸದೆ ತುರ್ತು ಚಿಕಿತ್ಸೆ ನೀಡಲು ಅಧಿಸೂಚನೆ ಹಾಗೂ ಸುತ್ತೋಲೆಯನ್ನು ಹೊರಡಿಸಲಾಗಿದೆ. ವಿವರಗಳನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.

**ಸಂಖ್ಯೆ: ಆಕುಕ 232 ಎಸ್‌ಎಂಎಂ 2025.**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

## ಅನುಬಂಧ - 1

Snake bite cases and deaths details (Source: IHIP)

| Year | Cases | Deaths |
|---|---|---|
| 2020 | 771 | 0 |
| 2021 | 952 | 0 |
| 2022 | 3439 | 17 |
| 2023 | 6596 | 19 |
| 2024 | 13235 | 100 |
| 2025 | 16805 | 154 |

## ಅನುಬಂಧ - 2

Snake Bite cases and deaths Age & Sex wise details (Source: IHIP)

| Year | Bite cases | | | Death cases | | |
|---|---|---|---|---|---|---|
| | Male | Female | Total | Male | Female | Total |
| **2024** | | | | | | |
| <18 Years | 1180 | 491 | 1671 | 12 | 7 | 19 |
| >60 Years | 897 | 450 | 1347 | 7 | 8 | 15 |
| All Age | 9137 | 4098 | 13235 | 57 | 43 | 100 |
| | | | | | | |
| **2025** | | | | | | |
| <18 Years | 1475 | 707 | 2182 | 16 | 15 | 31 |
| >60 Years | 942 | 438 | 1380 | 17 | 10 | 27 |
| All Age | 11425 | 5380 | 16805 | 85 | 69 | 154 |

(For) Project Director (IDSP)
Directorate of Health & F.W Services
Arogya Soudha, Magadi Road,
Bengaluru- 560 023

**ಕರ್ನಾಟಕ ಸರ್ಕಾರ**

**ಸಂಖ್ಯೆ:** ಆಕುಕ 426 ಸಿಜಿಇ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 15-11-2025

**ಸುತ್ತೋಲೆ**

**ವಿಷಯ:** ನಾಯಿ/ಪ್ರಾಣಿ ಮತ್ತು ಹಾವು ಕಚ್ಚಿದಾಗ ಖಾತ್ರಿ ಚಿಕಿತ್ಸೆ ಕುರಿತು.

**ಉಲ್ಲೇಖ:** ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ರಿಟ್ ಅರ್ಜಿ ಸಂಖ್ಯೆ: 5/2025ರಲ್ಲಿ ದಿನಾಂಕ 7-11-2025ರಂದು ನೀಡಿರುವ ನಿರ್ದೇಶನಗಳು.

*****

ಮೇಲಿನ ಉಲ್ಲೇಖಿತ ರಿಟ್ ಅರ್ಜಿಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ನಾಯಿ ಕಡಿತಕ್ಕೊಳಗಾದವರಿಗೆ ಚಿಕಿತ್ಸೆ ನೀಡುವ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಗೆ ಈ ಕೆಳಗಿನ ನಿರ್ದೇಶನಗಳನ್ನು ನೀಡಿರುತ್ತದೆ:-

"ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು ಯಾವಾಗಲೂ ಆಂಟಿ ರೇಬಿಸ್ ಲಸಿಕೆಗಳು ಮತ್ತು ಇಮ್ಯೂನೋಗ್ಲೋಬಿನ್ ಅನ್ನು ಕಡ್ಡಾಯವಾಗಿ ದಾಸ್ತಾನಾಗಿ ಇಟ್ಟುಕೊಳ್ಳತಕ್ಕದ್ದು."

ರಾಜ್ಯದಲ್ಲಿ ರೇಬಿಸ್ ಅನ್ನು ಒಂದು ಅಧಿಸೂಚಿತ ರೋಗವೆಂದು ಘೋಷಿಸಿರುವುದರಿಂದ, ನಾಯಿ/ಪ್ರಾಣಿ ಕಡಿತದ ಪ್ರಕರಣಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಅಧಿಸೂಚಿಸುವುದು ಮತ್ತು ಸರ್ಕಾರಿ ಹಾಗೂ ಖಾಸಗಿ ಆರೋಗ್ಯ ಸೌಲಭ್ಯಗಳ ಮೂಲಕ ಉಚಿತ ಮತ್ತು ಸಕಾಲಿಕ ಚಿಕಿತ್ಸೆಯ ಶಿಷ್ಟಾಚಾರದ ಅನ್ವಯ ಆಂಟಿ ರೇಬಿಸ್ ಲಸಿಕೆಯನ್ನು ಮತ್ತು ಒಂದು ಬಾರಿ ರೇಬೀಸ್ ಇಮ್ಯುನೊಗ್ಲಾಬ್ಯುಲಿನ್‌ನ್ನು ನೀಡುವುದು ಅವಶ್ಯಕವಾಗಿರುವುದರಿಂದ;

"2030ರ ವೇಳೆಗೆ ನಾಯಿ-ಇತರ ರೇಬಿಸ್ ಸೋಂಕಿತ ಸಾಕು ಪ್ರಾಣಿಗಳ ಕಡಿತದಿಂದ ಬರುವ ರೇಬೀಸ್ ಕಾಯಿಲೆಯಿಂದಾಗಿ ಶೂನ್ಯ ಮಾನವನ ಸಾವು" ಎಂಬ ರಾಷ್ಟ್ರೀಯ ಮತ್ತು ಜಾಗತಿಕ ಗುರಿಯನ್ನು ಸಾಧಿಸುವ ಸಲುವಾಗಿ ಮತ್ತು ನೀಡಲಾಗುವ ಎಲ್ಲಾ ಆರೋಗ್ಯ ಸೌಲಭ್ಯವನ್ನು ಬಳಸಿಕೊಂಡು ಪ್ರಾಣಿ ಕಡಿತಕ್ಕೊಳಗಾದ ವ್ಯಕ್ತಿಗಳಿಗಾಗಿ ಏಕರೂಪ ಜೀವ ರಕ್ಷಕ ಚಿಕಿತ್ಸೆಯನ್ನು ಖಾತ್ರಿಪಡಿಸಲು ಸರ್ಕಾರವು ಈ ಮುಂದಿನಂತೆ ಆದೇಶಗಳನ್ನು ಹೊರಡಿಸಲು ನಿರ್ಧರಿಸಿರುವುದರಿಂದ;

ಹಾವು ಕಡಿತದಿಂದ ಉಂಟಾಗುವ ಸಾವುಗಳು ಹಾಗೂ ತೊಂದರೆಗಳು ಗಣನೀಯವಾಗಿ ಏರುತ್ತಿರುವುದನ್ನು ಸಹ ಗಮನಿಸಲಾಗಿದ್ದು, ಅದಕ್ಕನುಗುಣವಾಗಿ, ಹಾವು ಕಡಿತಕ್ಕೊಳಗಾದವರಿಗೆ ಹತ್ತಿರದಲ್ಲಿ ಲಭ್ಯವಿರುವ ಆರೋಗ್ಯ ಸೌಲಭ್ಯ ಕೇಂದ್ರದಲ್ಲಿ ನಿಗದಿತ ತುರ್ತು ಚಿಕಿತ್ಸೆಯನ್ನು ನೀಡುವುದು ಅಗತ್ಯವಿರುತ್ತದೆ.

ಮೇಲಿನ ಅಂಶಗಳಿಗನುಸಾರವಾಗಿ, ಎಲ್ಲಾ ಆಸ್ಪತ್ರೆ ಸಂಸ್ಥೆಗಳು/ವೈದ್ಯಕೀಯ ಸಂಸ್ಥೆಗಳ (ಸರ್ಕಾರಿ ಮತ್ತು ಖಾಸಗಿ) ಮುಖ್ಯಸ್ಥರಿಗೆ ಈ ಕೆಳಗಿನಂತೆ ನಿರ್ದೇಶನಗಳನ್ನು ನೀಡಲಾಗಿದೆ:

(ಎ) ವೈದ್ಯಕೀಯ ಸಂಸ್ಥೆಯ (ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು) ಪ್ರತಿಯೊಬ್ಬ ಮುಖ್ಯಸ್ಥರು ಎಲ್ಲಾ ಸಮಯದಲ್ಲೂ ಆಂಟಿ ರೇಬೀಸ್ ಲಸಿಕೆಗಳು ಮತ್ತು ಇಮ್ಯುನೊಗ್ಲಾಬ್ಯುಲಿನ್ ಹಾಗೂ ಎ.ಎಸ್.ವಿ. ಗಳನ್ನು ಕಡ್ಡಾಯವಾಗಿ ದಾಸ್ತಾನು ಇಟ್ಟುಕೊಂಡಿರಬೇಕು.

....2

(ಬಿ) ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆ ಅಧಿನಿಯಮ, 2007ರ ಪ್ರಕರಣ 11(1)ರ ಅಡಿಯಲ್ಲಿ, ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ಸಂಸ್ಥೆಗೆ ತಾವಾಗಿಯೇ ಬರುವ ಅಥವಾ ಯಾರಾದರೂ ಕರೆತಂದ ನಾಯಿ/ಪ್ರಾಣಿ ಕಡಿತ/ಹಾವು ಕಡಿತಕ್ಕೊಳಗಾದ ವ್ಯಕ್ತಿಗಳಿಗೆ ತುರ್ತು ಚಿಕಿತ್ಸೆ ಆಗತ್ಯವಿದ್ದ ಸಂದರ್ಭದಲ್ಲಿ ಮುಂಗಡವನ್ನು ಪಾವತಿಸುವಂತೆ ಒತ್ತಾಯಪಡಿಸದೆ ಅಗತ್ಯ ಪ್ರಥಮ ಚಿಕಿತ್ಸೆ ನೀಡತಕ್ಕದ್ದು ಮತ್ತು ಇತರ ಪ್ರಾಣ ಉಳಿಸುವ, ದೇಹಸ್ಥಿತಿ ಸ್ಥಿರಗೊಳಿಸುವ ತುರ್ತು ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(ಸಿ) ಕರ್ನಾಟಕ ಜೀವರಕ್ಷಕ ಮತ್ತು ವೈದ್ಯಕೀಯ ವೃತ್ತಿನಿರತರ (ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ ಮತ್ತು ನಿಯಂತ್ರಣ) ಅಧಿನಿಯಮ, 2016ರ ಪ್ರಕರಣ 6ರ ಅಡಿಯಲ್ಲಿ, ಪ್ರತಿಯೊಂದು ಆಸ್ಪತ್ರೆಯು ಕೂಡಲೇ ಯಾರೇ ಅಂಥ ನಾಯಿ/ಹಾವು ಕಡಿತಕ್ಕೊಳಗಾದ ಗಾಯಗೊಂಡ ವ್ಯಕ್ತಿಗಳ ಆರೋಗ್ಯ ಸ್ಥಿತಿಗಳನ್ನು ಉತ್ತಮಪಡಿಸಲು ಮತ್ತು ಚೇತರಿಸಿಕೊಳ್ಳುವ ಉದ್ದೇಶಕ್ಕಾಗಿ ಅದು ಅವಶ್ಯವೆಂದು ಪರಿಗಣಿಸುವ ವೈದ್ಯಕೀಯ ಪರಿಶೀಲನಾ ಸೇವೆಗಳನ್ನು ಮತ್ತು ಪ್ರಥಮ ಚಿಕಿತ್ಸೆಯನ್ನು ಒದಗಿಸತಕ್ಕದ್ದು ಹಾಗೂ ಯುಕ್ತ ಚಿಕಿತ್ಸೆಯನ್ನು ನೀಡತಕ್ಕದ್ದು.

ಪರಂತು, ಅಗತ್ಯ ಸೌಲಭ್ಯಗಳ ಅಥವಾ ಅರ್ಹ ಸಿಬ್ಬಂದಿ ಕೊರತೆಯಿರುವ ಆಸ್ಪತ್ರೆಯು, ಅಂತಹ ಯುಕ್ತ ಚಿಕಿತ್ಸೆಯನ್ನು ನೀಡಲು ಅಸಮರ್ಥವಾದಲ್ಲಿ, ಅಂಥ ಆಸ್ಪತ್ರೆಯು ಅಂಥ ಯುಕ್ತ ವ್ಯವಸ್ಥೆಗಳು ಅಥವಾ ಸಿಬ್ಬಂದಿ ಮತ್ತು ಸ್ಥಳಾವಕಾಶ ಲಭ್ಯವಿರುವ ಹತ್ತಿರದ ಆಸ್ಪತ್ರೆಗೆ ಆತನನ್ನು ಕಳುಹಿಸುವ ಮೊದಲು, ಆತನ ಆರೋಗ್ಯವನ್ನು ಸ್ಥಿರವಾದ ಸ್ಥಿತಿಯಲ್ಲಿಡುವ ಸಲುವಾಗಿ ಗಾಯಾಳುವಿನ ಆರೋಗ್ಯಕ್ಕೆ ಆಗುವ ಅಪಾಯದ ಸಂಭವವನ್ನು ಕಡಿಮೆ ಮಾಡುವುದಕ್ಕೆ ಸಂಬಂಧಿಸಿದಂತೆ ತನ್ನ ಸಾಮರ್ಥ್ಯದೊಳಗೆ ಲಭ್ಯವಿರುವ ಅಂಥ ಚಿಕಿತ್ಸೆಯನ್ನು ಒದಗಿಸತಕ್ಕದ್ದು ಅಥವಾ ಕ್ರಮವನ್ನು ಕೈಗೊಳ್ಳತಕ್ಕದ್ದು.

(ಡಿ) ಸದರಿ ಅಧಿನಿಯಮದ 11(4)ನೇ ಪ್ರಕರಣದ ಮತ್ತು ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ, ಆಸ್ಪತ್ರೆಯು ನಾಯಿ/ಹಾವು ಕಡಿತಕ್ಕೆ ಒಳಗಾದ ವ್ಯಕ್ತಿಗಳಿಗೆ ನೀಡಲಾದ ಚಿಕಿತ್ಸೆಗಾಗಿ ಭರಿಸಿದ ಶುಲ್ಕಗಳು ಅಥವಾ ವೆಚ್ಚಗಳನ್ನು ಎಸ್.ಎ.ಎಸ್.ಟಿ. ಸ್ಕೀಮಿನ ಅಡಿಯಲ್ಲಿ ಅಂಗೀಕಾರಾರ್ಹ ದರಗಳಲ್ಲಿ ಅಂತಹ ಚಿಕಿತ್ಸೆಗಾಗಿ ಭರಿಸಿದ ವೆಚ್ಚ ಅಥವಾ ವೆಚ್ಚಗಳ ಸೂಕ್ತ ಕನಿಷ್ಠ ಪ್ರಮಾಣವನ್ನು ಮರುಪಡೆಯಲು ಸಾಧ್ಯವಾಗದಿದ್ದರೆ ಅದು ನೀಡಲಾದ ಚಿಕಿತ್ಸೆಗಾಗಿ ಭರಿಸಿದ ಖರ್ಚು ಅಥವಾ ವೆಚ್ಚಗಳನ್ನು ಜಿಲ್ಲಾ ನೋಂದಣಿ ಮತ್ತು ಕುಂದುಕೊರತೆ ಪ್ರಾಧಿಕಾರವು ಅಂಥ ಆಸ್ಪತ್ರೆಗೆ ಮರುಪಾವತಿ ಮಾಡತಕ್ಕದ್ದು.

ಆದ್ದರಿಂದ, ಈ ಅಧಿನಿಯಮದ ಅಡಿಯಲ್ಲಿನ ಅಪರಾಧವು, ಹಾವು ಕಡಿತ / ಪ್ರಾಣಿ ಕಡಿತಕ್ಕೊಳಗಾದ ವ್ಯಕ್ತಿಗಳ ಸಾವಿಗೆ ಕಾರಣವಾದರೆ, ಅದನ್ನು ವೈದ್ಯಕೀಯ ನಿರ್ಲಕ್ಷ್ಯದ ಪ್ರಕರಣವೆಂದು ಪರಿಗಣಿಸಿ, ವೈದ್ಯಕೀಯ ಸಂಸ್ಥೆಯ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಬಹುದು. ಇದು ಭಾರತೀಯ ನ್ಯಾಯ ಸಂಹಿತೆ, 2023ರ 106ನೇ ಪ್ರಕರಣದ ಅಡಿಯಲ್ಲಿ ಎರಡು ವರ್ಷಗಳವರೆಗಿನ ಕಾರಾವಾಸ ಶಿಕ್ಷೆಗೂ ಕಾರಣವಾಗಬಹುದು. ಆದಾಗ್ಯೂ, ಈ ಪ್ರಕರಣದಲ್ಲಿರುವುದು ಯಾವುದೂ, ಗಂಭೀರ ಅಥವಾ ಕಡ್ಡಾಯ ಕರ್ತವ್ಯದ ಪುನರಾವರ್ತಿತ ನಿರ್ಲಕ್ಷ್ಯದ ಪ್ರಕರಣದಲ್ಲಿ ಸಂಬಂಧಪಟ್ಟ ಜಿಲ್ಲಾ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ವೈದ್ಯಕೀಯ ಸಂಸ್ಥೆಯ

ಪರವಾನಗಿಯನ್ನು ರದ್ದುಪಡಿಸುವುದು ಅಗತ್ಯವೆಂದು ಭಾವಿಸಿದರೆ ಅಂಥ ವೈದ್ಯಕೀಯ ಸಂಸ್ಥೆಯ ಪರವಾನಗಿಯನ್ನು ರದ್ದುಗೊಳಿಸುವುದರಿಂದ ಪ್ರತಿಬಂಧಿಸತಕ್ಕದ್ದಲ್ಲ.

(ಪ್ರಭಾಕರ್ ಟಿ.) 15/11
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಆರೋಗ್ಯ 1 & 2)
16/01

**ಇವರಿಗೆ,**

1. ಕರ್ನಾಟಕದ ಪ್ರಧಾನ ಮಹಾ ಲೇಖಾಪಾಲರು (ಜಿಪಿಎಸ್‌ಎಸ್‌ಎ), (ಇ&ಆರ್.ಎಸ್.ಎ), (ಎ&ಇ), ಆಡಿಟ್ ಭವನ, ಬೆಂಗಳೂರು-560001.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು
3. ಕಾರ್ಯನಿರ್ವಾಹಕ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಆರೋಗ್ಯ ಸೌಧ, ಬೆಂಗಳೂರು.
4. ಮಿಷನ್ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಮಿಷನ್, ಆರೋಗ್ಯ ಸೌಧ, ಬೆಂಗಳೂರು.
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು
6. ಸಂಬಂಧಪಟ್ಟ ಅಧಿಕಾರಿಗಳು (ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಮೂಲಕ)
7. ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿಗಳು.

**ಮಾಹಿತಿಗಾಗಿ:**

1. ಮಾನ್ಯ ಸಚಿವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ/ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ/ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ/ ಹಣಕಾಸು ಇಲಾಖೆ/ ಕಂದಾಯ ಇಲಾಖೆ/ ಸಂಸದೀಯ ವ್ಯವಹಾರಗಳೂ ಮತ್ತು ಶಾಸನ ರಚನಾ ಇಲಾಖೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5. ಸರ್ಕಾರದ ಉಪಕಾರ್ಯದರ್ಶಿ-4ರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.

....4

**ಕರ್ನಾಟಕ ಸರ್ಕಾರ**

**ಸಂಖ್ಯೆ:** ಆಕುಕ 426 ಸಿಜಿಇ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಡಾ.ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 15-11-2025

**ಅಧಿಸೂಚನೆ**

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007 (2007ರ ಕರ್ನಾಟಕ ಅಧಿನಿಯಮ 21)ರ 11ನೇ ಬಿ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಸದರಿ ಅಧಿನಿಯಮದ ಅನುಸೂಚಿಗೆ ಈ ಕೆಳಗಿನಂತೆ ತಿದ್ದುಪಡಿ ಮಾಡುತ್ತದೆ, ಎಂದರೆ:-

ಸದರಿ ಅಧಿನಿಯಮದ ಅನುಸೂಚಿಯಲ್ಲಿ, "1. ರೋಗಿಗಳ ಸನ್ನದ್ದು, ಎ. ರೋಗಿಗಳ ಹಕ್ಕುಗಳು" ಎಂಬ ಶೀರ್ಷಿಕೆಯ ಅಡಿಯಲ್ಲಿನ, (1)ನೇ ಖಂಡದಲ್ಲಿನ, (ii)ನೇ ಉಪ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:

"(iiಎ) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ಆ ಸಂಸ್ಥೆಗೆ ಹಾವು ಕಡಿತ ಅಥವಾ ನಾಯಿ, ಅಥವಾ ಪ್ರಾಣಿಗಳ ಕಡಿತಕ್ಕೊಳಗಾದವರು ತಾವೇ ಸ್ವತಃ ಬರುವ ಅಥವಾ ಇತರರು ಕರೆತರುವ ವ್ಯಕ್ತಿಗಳಿಗೆ ತುರ್ತು ಚಿಕಿತ್ಸೆ ಅಗತ್ಯವಿರುವ ಎಲ್ಲಾ ತುರ್ತು ಪ್ರಕರಣಗಳಲ್ಲಿ, ಮುಂಗಡ ಪಾವತಿಗೆ ಒತ್ತಾಯಿಸದೆ ಅವರಿಗೆ ಅಗತ್ಯ ಪ್ರಥಮ ಚಿಕಿತ್ಸೆ ನೀಡತಕ್ಕದ್ದು ಮತ್ತು ಇತರ ಜೀವ ರಕ್ಷಕ ಅಥವಾ ಆರೋಗ್ಯವನ್ನು ಸ್ಥಿರಗೊಳಿಸುವ ತುರ್ತು ಕ್ರಮಗಳನ್ನು ಕೈಗೊಳ್ಳತಕ್ಕದ್ದು; ಮತ್ತು ಅಂತಹ ಕ್ಲೇಮನ್ನು SAST ಯೋಜನೆಯಡಿ ಅರ್ಹ ರೋಗಿಗಳಿಗೆ ಅಂಗೀಕಾರಾರ್ಹವಾದ ದರದಲ್ಲಿ ಜಿಲ್ಲಾ ನೋಂದಣಿ ಮತ್ತು ಕುಂದುಕೊರತೆ ಪ್ರಾಧಿಕಾರದ ಮುಖಾಂತರ ರಾಜ್ಯ ಸರ್ಕಾರದಿಂದ ಕ್ಲೇಮು ಮಾಡಲು ಅರ್ಹರಾಗಿರತಕ್ಕದ್ದು".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15/11

**(ಪ್ರಭಾಕರ್ ಟಿ.)**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಆರೋಗ್ಯ 1 & 2)

16/01

ಸಂಕಲಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಇವರಿಗೆ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲು ಮತ್ತು ಕೂಡಲೇ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಆರೋಗ್ಯ-2)ಕ್ಕೆ 100 ಪ್ರತಿಗಳನ್ನು ಪೂರೈಸಲು ಕೋರಿದೆ.

**ಪ್ರತಿಗಳು:**

1. ಕರ್ನಾಟಕದ ಪ್ರಧಾನ ಮಹಾ ಲೇಖಾಪಾಲರು (ಜಿಪಿಎಸ್‌ಎಸ್‌ಎ), (ಇ&ಆರ್.ಎಸ್.ಎ), (ಎ&ಇ), ಆಡಿಟ್ ಭವನ, ಬೆಂಗಳೂರು-560 001.

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ/ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ/ ಆರ್ಥಿಕ ಇಲಾಖೆ/ ಕಂದಾಯ ಇಲಾಖೆ/ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ/
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು
4. ಕಾರ್ಯನಿರ್ವಾಹಕ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಆರೋಗ್ಯ ಸೌಧ, ಬೆಂಗಳೂರು.
5. ಮಿಷನ್ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಮಿಷನ್, ಆರೋಗ್ಯ ಸೌಧ, ಬೆಂಗಳೂರು.
6. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು
7. ಸಂಬಂಧಪಟ್ಟ ಅಧಿಕಾರಿಗಳು (ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಮೂಲಕ)
8. ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿಗಳು.

**ಮಾಹಿತಿಗಾಗಿ:**

1. ಮಾನ್ಯ ಸಚಿವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಸರ್ಕಾರದ ಉಪಕಾರ್ಯದರ್ಶಿ-4ರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.